ಪಠ್ಯಕ್ರಮದಲ್ಲಿ ಕೇಸರೀಕರಣ ಕುರಿತು

1422(2400); ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ಪ್ರಸ್ತುತವಿರುವ ಪಠ್ಯಕ್ರಮದಲ್ಲಿ ಕೇಸರೀಕರಣ ಆಗಿದೆ ಎಂಬ ಆರೋಪ ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ ಹೊಸ ಪಠ್ಯಕ್ರಮ ಜಾರಿಗೆ ಮುಂದಾಗಿದೆಯೇ; (ಇದು ಯಾವ ಹಂತದಲ್ಲಿದೆ);

ಇ) ಹೊಸ ಪಠ್ಯಕ್ರಮ ಜಾರಿಗೆ ಪ್ರತ್ಯೇಕ ಸಮಿತಿ ರಚಿಸಿರುವುದು ನಿಜವೇ; ಅದರ ನೇತೃತ್ವವನ್ನು ಯಾರಿಗೆ ವಹಿಸಲಾಗಿದೆ.

ಈ) ಪಠ್ಯದಲ್ಲಿ ಕೇಸರೀಕರಣ ಆಗಿದೆ ಎನ್ನುವುದಕ್ಕೆ ಸಿಕ್ಕ ಆಧಾರಗಳು ಯಾವುವು; ಯಾವ ತರಗತಿಯ ಪಠ್ಯದಲ್ಲಿ ಈ ಮಾಹಿತಿ ಲಭ್ಯವಾಗಿದೆ.;

ಉ) ಹೊಸ ಪಠ್ಯಕ್ರಮ ಯಾವ ರೀತಿ ಇರಲಿದೆ; ಯಾವ ಅಂಶವನ್ನು ಪ್ರಮುಖವಾಗಿ ಪರಿಗಣಿಸಲು ಸೂಚಿಸಲಾಗಿದೆ;

ಊ) ನಲಿ–ಕಲಿ ಪದ್ದತಿ ಸೇರಿದಂತೆ ಹಲವು ಪದ್ದತಿಗಳಲ್ಲಿ ಮಾರ್ಪಾಡು ತರಲು ಸರ್ಕಾರ ಮುಂದಾಗಿದೆಯೇ; ಶಿಕ್ಷಣದಲ್ಲಿರುವ ಗೊಂದಲ ನಿವಾರಣಗೆ ಕೈಗೊಂಡ ಕ್ರಮ ಏನು (ವಿವರಿಸಿ)?

ಶ್ರೀ ಕಿಮ್ಮನೆ ರತ್ನಾಕರ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)

ಅ) ಬಂದಿದೆ. ಆದರೆ ಕೇಸರೀಕರಣವೆಂದರೇನು ಎಂಬ ಬಗ್ಗೆ ಗೊಂದಲವಿದೆ.

ಆ) 2011–12ನೇ ಸಾಲಿನಿಂದಲೇ ಎನ್.ಸಿ.ಎಫ್–2005 ಪಠ್ಯಕ್ರಮ ಆಧಾರಿತ ಹೊಸ ಪಠ್ಯಕ್ರಮ ಜಾರಿಯಲ್ಲಿರುತ್ತದೆ. ಈ ಪಠ್ಯಪುಸ್ತಕಗಳಲ್ಲಿ ಲೋಪದೋಷಗಳನ್ನು ಸರಿಪಡಿಸಲು ಸರ್ಕಾರ ಪರಿಷ್ಕರಣಾ ಸಮಿತಿಗಳನ್ನು ನೇಮಕ ಮಾಡಿದೆ. ಪರಿಷ್ಕರಣಾ ಕಾರ್ಯ ಪ್ರಗತಿಯಲ್ಲಿದೆ.

ಇ) ಪಠ್ಯಪುಸ್ತಕಗಳ ಪರಿಷ್ಕರಣೆಗೆ ಸರ್ಕಾರ ಸಮಿತಿಗಳನ್ನು ರಚಿಸಿರುತ್ತದೆ. ಅದರ ನೇತೃತ್ವವನ್ನು ಡಾ॥ ಬರಗೂರು ರಾಮಚಂದ್ರಪ್ಪ ಇವರಿಗೆ ವಹಿಸಿದೆ.

ಈ) ಯಾವುದೇ ಆಧಾರ ಸಿಕ್ಕಿರುವುದಿಲ್ಲ.

ಉ) ಹೊಸ ಪಠ್ಯಕ್ರಮವು ಎನ್.ಸಿ.ಎಫ್ 2005ರ ಪ್ರಕಾರ ಮತ್ತು ಅದರಲ್ಲಿನ ಅಂಶಗಳ ಪ್ರಕಾರವೇ ಇರುತ್ತದೆ.

ಊ) ಪರಿಶೀಲನೆಯಲ್ಲಿದೆ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬಯೋಮೆಟ್ರಿಕ್ ಅಳವಡಿಕೆ

1423(2401); ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ಉನ್ನತ ಶಿಕ್ಷಣ ಸಂಸ್ಥೆಗಳಲ್ಲೂ ಬಯೋಮೆಟ್ರಿಕ್ ಅಳವಡಿಸಬೇಕೆಂದು ವಿಶ್ವವಿದ್ಯಾನಿಲಯ ಅನುದಾನ ಆಯೋಗ (ಯುಜಿಸಿ) ಎಲ್ಲಾ ರಾಜ್ಯ ಸರ್ಕಾರಗಳಿಗೆ ಶಿಫಾರಸ್ಸು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಶಿಫಾರಸ್‌ನ ವಿವರ ಒದಗಿಸುವುದು);

ಆ) ಈ ಪದ್ಧತಿಯಿಂದ ವಿದ್ಯಾರ್ಥಿಗಳಿಗೆ ಆಗುವ ಅನುಕೂಲವೇನು;

ಇ) ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಯುಜಿಸಿ ಶಿಕ್ಷಣ ಸಂಸ್ಥೆಗಳು ಹಾಗೂ ವಿದ್ಯಾರ್ಥಿ–ವಿದ್ಯಾರ್ಥಿನಿಯರು ವಾಸ್ತವ್ಯ ಹೂಡುವ ಹಾಸ್ಟಲ್‌ಗಳಲ್ಲಿ ಬಯೋಮೆಟ್ರಿಕ್ ಅಳವಡಿಸಬೇಕೆಂದು ಸಲಹೆ ನೀಡಲಾಗಿದೆಯೇ;

ಈ) ಹಾಗಿದ್ದಲ್ಲಿ, ಅಳವಡಿಕೆ ಕಾರ್ಯ ಯಾವ ಹಂತದಲ್ಲಿದೆ (ವಿವರ ನೀಡುವುದು);

ಉ) ಈ ವ್ಯವಸ್ಥೆ ಜಾರಿಗೆ ತರುತ್ತಿರುವುದರ ಉದ್ದೇಶವೇನು (ವಿವರ ಒದಗಿಸುವುದು)?